

ಎರಡು ಸಾವಿರ ವರ್ಷಗಳಿಗೂ ಹಿಂದೆ, ಪ್ರಾಚೀನದಲ್ಲಿ, ಸಂಸಾರದ ಜಂಜಡದಿಂದ ಪಾರಾಗುವ ಸಲುವಾಗಿ ಬೌದ್ಧ ಧರ್ಮವನ್ನು ನೆಚ್ಚಿಕೊಂಡ 'ತೇರಿ' ಎಂದರೆ ಬೌದ್ಧ ಭಿಕ್ಷುಣಿಯರೆನಿಸಿಕೊಂಡ ಮಹಿಳೆಯರು ಬರೆದ 'ತೇರಿಗಾಥಾ' ಭಾರತೀಯ ಮಹಿಳಾ ಸಾಹಿತ್ಯದ ಮುಂಚೂಣಿಯ ಬರಹಗಳೆಂದು ಇವತ್ತು ಗುರುತಿಸಲಾಗುತ್ತಿದೆ. ಸತ್ಯ ಮತ್ತು ಸ್ವಾತಂತ್ರ್ಯದ ಶೋಧದಲ್ಲಿ ಜೀವ ತಳೆದ 'ತೇರಿಗಾಥಾ' ತನ್ನ ಕಾವ್ಯಾತ್ಮಕ ಗುಣದಿಂದಲೂ ಗಮನ ಸೆಳೆಯುತ್ತದೆ. ಮುಂದೆ ಅನೇಕ ರೀತಿಯ ಸಾಮಾಜಿಕ, ಧಾರ್ಮಿಕ, ಬೌದ್ಧಿಕ, ಭಾವನಾತ್ಮಕ ಕಟ್ಟುಪಾಡುಗಳಿಗೆ ಮಹಿಳೆಯನ್ನು ಗುರಿಪಡಿಸಿದ್ದರ ಪರಿಣಾಮ ತನ್ನೆಲ್ಲ ಸಕ್ಷಮತೆ, ಚಿಂತನೆ, ಬುದ್ಧಿಮತ್ತೆಯ ಹೊರತಾಗಿಯೂ ನೂರಾರು ವರ್ಷಗಳ ಕಾಲ ಮಹಿಳೆ ಅಭಿವ್ಯಕ್ತಿಯಿಂದ ವಂಚಿತಳಾಗಿಯೇ ಉಳಿಯಬೇಕಾಯಿತು.

ಕ್ರಿ.ಪೂ. 100ರಿಂದ ಕ್ರಿ.ಶ. 250ರ ನಡುವೆ ಭಕ್ತಿ ಸಾಹಿತ್ಯವನ್ನು ವಿಪುಲಗೊಳಿಸಿದ ತಮಿಳುನಾಡಿನ ಸಂಗಮ ಕವಿಗಳಲ್ಲಿ ಅವ್ವೈಯಾರ್ ಪ್ರಮುಖಳು. ಇದೇ ಸಂಪ್ರದಾಯ ಮುಂದುವರಿದು ಎಂಟನೇ ಶತಮಾನದಲ್ಲಿ ಆಂಡಾಳ್, ಹನ್ನೆರಡನೇ ಶತಮಾನದಲ್ಲಿ ಅಕ್ಕಮಹಾದೇವಿ, ಹದಿನಾಲ್ಕನೇ ಶತಮಾನದಲ್ಲಿ ಜನಾಬಾಯಿ, ಹದಿನಾರನೇ ಶತಮಾನದಲ್ಲಿ ಮೀರಾಬಾಯಿ, ಹದಿನೇಳನೇ ಶತಮಾನದಲ್ಲಿ ಬಹಿನಾಬಾಯಿ, ಸಂಚಿಯ ಹೊನ್ನಮ್ಮ, ಹದಿನೆಂಟನೇ ಶತಮಾನದಲ್ಲಿ ಮುದ್ದುಪಳನಿ, ಮಹ್ಲಾಖಾ ಬಾಯಿ ಚಂದಾ – ಇನ್ನೂ ಅನೇಕಾನೇಕ ಮಹಿಳೆಯರು ವಿವಿಧ ಭಕ್ತಿಪಂಥಗಳಲ್ಲಿ ಸಾಗುತ್ತಲೇ ಸಮಾಜದ ಸಂಕುಚಿತತೆ ಮತ್ತು ಡಂಬಾಚಾರಗಳನ್ನು ತಮ್ಮ ಪ್ರಖರ ವೈಚಾರಿಕತೆಯಿಂದ ಪ್ರಶ್ನಿಸಿದರು, ಲೇವಡಿ ಮಾಡಿದರು, ಬದಲಾವಣೆಗೆ ಆಗ್ರಹಿಸಿದರು.

ಆ ಎಲ್ಲ ಪ್ರಾಚೀನ ಮತ್ತು ಮಧ್ಯಕಾಲೀನ ಯುಗದ ಲೇಖಕಿಯರ ಕೊಡುಗೆಯನ್ನು ಅರಸಿ, ಶೋಧಿಸಿ ಮುನ್ನೆಲೆಗೆ ತರುವಂತಹ ಮಹತ್ತರವಾದ ಕಾರ್ಯವನ್ನು ಆಧುನಿಕ ಯುಗದಲ್ಲಿ ಸಂಶೋಧಕರು ಕೈಗೊಳ್ಳದೇ ಹೋಗದಿದ್ದಲ್ಲಿ, ಆ ಅನರ್ಘ್ಯ ರತ್ನಗಳೆಲ್ಲ ಕಾಲದ, ಸಮಾಜದ ಅವಜ್ಞೆಗೆ ಒಳಪಟ್ಟು ನಶಿಸಿ ಹೋಗುತ್ತಿದ್ದವು.

ಕಾಲ ಸರಿದು ಭಾರತದಲ್ಲಿ ಮಹಿಳಾ ಸಾಹಿತ್ಯ ಕೃಷಿಗೆ ಹೊಸ ಇಂಬು ಸಿಗಬೇಕಾದರೆ ಹತ್ತೊಂಬತ್ತನೇ ಶತಮಾನ ಬರಬೇಕಾಯಿತು. ಕೆಲವರಾದರೂ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ದೊರೆತು ಅವರ ಕೈಗೆ ಲೇಖನಿ ಬಂದಾಗಲಷ್ಟೇ ಬೆರಳೆಣಿಕೆಯಷ್ಟಾದರೂ ಹೆಣ್ಣುಮಕ್ಕಳು ಬರೆಯಲು ಸಾಧ್ಯವಾಯಿತು.